Prajavani

The Resource Centre

Date: 27/03/2010 Page No: 4 Location: MAIN Circulation: 425000

Edition: Bangalore

EMAMI

# ಇಮಾಮಿ ಎಣ್ಣೆಯಲ್ಲಿ ಐಂದ್ರಿತಾ ಅಡುಗೆ




ಐಂದ್ರಿತಾಗೂ ಅಡುಗೆ ಮಾಡಲು ಬರುತ್ತದೆಯೇ ಎಂದು ಕೇಳಿದರೆ, ಖಂಡಿತಾ ಬರುತ್ತೆ ಎಂಬ ಉತ್ತರ ಇಲ್ಲಿ ಸಿಗಬಹುದು. ಮೊನ್ನೆ ಐಷಾರಾಮಿ ಹೋಟೆಲ್ ಒಂದರಲ್ಲಿ ತಲೆಗೊಂದು ಟೋಪಿ, ಏಪ್ರನ್ ಧರಿಸಿ ಬಂದ ಐಂದ್ರಿತಾ ನೇರವಾಗಿ ಒಲೆ ಮುಂದೆ ನಿಂತು, ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಸುರಿದು, ತಿಂಡಿ ಕರಿದರು. ನಟಿಯಾಗಿದ್ದರೂ ಅಡುಗೆ ಮಾಡಬಲ್ಲೆ ಎಂದು ಸಾಬೀತಪಡಿಸಿದರು.
ಇವೆಲ್ಲಾ ಯಾಕೆ ಅಂದಿರಾ...?

ಆರೋಗ್ಯ ಹಾಗೂ ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕಾ ಸಂಸ್ಥೆ ಇಮಾಮಿ ಇದೀಗ 'ಹೆಲ್ದಿ ಅಂಡ್ ಟೇಸ್ಟೀ' ಎಂಬ ಆರೋಗ್ಯಪೂರ್ಣ ಖಾದ್ಯ ತೈಲಗಳ ತಯಾರಿಕೆ ಆರಂಭಿಸಿದೆ. ಇದರ ಬಿಡುಗಡೆಗೆ ಬಂದಿದ್ದರು ಬೆಂಗಾಳಿ ಬೆಡಗಿ ಐಂದ್ರಿತಾ. ತಿಂಡಿ, ತಿನಿಸುಗಳಲ್ಲಿ ತನ್ನ ಇಷ್ಟ ಕಷ್ಟಗಳನ್ನು ಹಂಚಿಕೊಂಡರು.

ಐಂದ್ರಿತಾಗೆ ಕರಿದ ತಿಂಡಿ ಇಷ್ಟ. ಆದರೆ ಎಲ್ಲಿ ಊದುತ್ತೇನೋ ಎಂಬ ಭಯವಂತೆ. 'ಆದರೆ ಇಮಾಮಿಯಷ್ಟು ಶುದ್ಧ ಹಾಗೂ ಆರೋಗ್ಯಕರ ಎಣ್ಣೆಯಿಂದ ಕರಿದಿದ್ದೇ ಆದರೆ ಖಂಡಿತಾ ಹೆಚ್ಚು ಇಷ್ಟಪಟ್ಟು ತಿನ್ನುತ್ತೇನೆ' ಎಂದು ಅಪ್ಪಟ ಪ್ರಚಾರ ರಾಯಭಾರಿಯಂತೆ ನುಡಿದರು. ಛಾಯಾಗ್ರಾಹಕರ ಮನವಿಯಂತೆ ಮತ್ತೊಮ್ಮೆ ಎಣ್ಣೆ ಸುರಿಯುತ್ತಾ, ತಿಂಡಿ ಕರಿಯುತ್ತಾ ಕ್ಯಾಮೆರಾಕ್ಕೆ ಪೋಸು ನೀಡಿದರು.

'ಇಂದಿನ ಮಕ್ಕಳ ಬಹುತೇಕ ಆಯ್ಕೆಗಳು ರುಚಿಕರ ಕರಿದ ಪದಾರ್ಥಗಳೇ ಆಗಿರುತ್ತವೆ. ಆದರೆ ವಯಸ್ಕರಿಗೂ ಇಂಥ ಆಸೆಗಳಿದ್ದರೂ ಕೊಲೆಸ್ಟರಾಲ್ ಎಲ್ಲಿ ಏರಿಬಿಡುತ್ತದೋ ಎಂಬ ಭಯ ಸದಾ ಕಾಡುತ್ತಿರುತ್ತದೆ. ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ಇಮಾಮಿ ಇದೀಗ 'ಹೆಲ್ದಿ ಅಂಡ್ ಟೇಸ್ಟೀ' ಎಂಬ ಆರೋಗ್ಯಪೂರ್ಣ ಖಾದ್ಯ ತೈಲಗಳ ತಯಾರಿಕೆ ಆರಂಭಿಸಿದೆ' ಎಂದು ಸಂಸ್ಥೆಯ ಅಧಿಕಾರಿಗಳು ವಿವರಿಸಿದರು.

ಸೋಯಾಕಾಳು, ಸೂರ್ಯಕಾಂತಿ ಹಾಗೂ ರಿಫೈಂಡ್ ವೆಜಿಟೆಬಲ್ ಎಂಬ ಮೂರು ಬಗೆಯಲ್ಲಿ ಇವು ಲಭ್ಯ. ಎಣ್ಣೆಯ ಶುದ್ಧತೆ ಹಾಗೂ ರುಚಿಗಾಗಿ ಯುರೋಪಿನ ಪರಿಷ್ಕರಣಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ ಖಾದ್ಯ ತೈಲ ಏಳು ಹಂತಗಳಲ್ಲಿ ಸಂಸ್ಕರಣೆಗೊಳ್ಳಲಿದೆ.

ಮಹೇಂದ್ರ ಸಿಂಗ್ ಧೋನಿ ಹಾಗೂ ಪ್ರೀತಿ ಜಿಂಟಾ ಇಮಾಮಿ ಅಡುಗೆ ಎಣ್ಣೆಯ ಪ್ರಚಾರ ರಾಯಭಾರಿಯಾಗಿ ಜಾಹೀರಾತಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

Copyright of the article is with the publication